ಉದ್ದವಾಗುತ್ತಿತ್ತು. ಬಾಯಲ್ಲಿ ಮಣಮಣ ಮಂತ್ರ. “ದೇವರಿಗೆ ಬೈತಿದೀಯೇನೋ?” ಎಂದು ಕಿಚಾಯಿಸುತ್ತಿದ್ದಳು ಶ್ರಾವಂತಿ. ಪ್ರತ್ಯುತ್ತರಿಸಿ ಮಂತ್ರ ತಪ್ಪುವುದಕ್ಕೆ ಆಸ್ಪದ ಕೊಡುತ್ತಿರಲಿಲ್ಲ ನಕುಲ. ಇವೆಲ್ಲಾ ಆಚರಣೆಗಳನ್ನು ಅವನು ತನಗಾಗಿ ಉಳಿಸಿಕೊಂಡು ಬಂದಿದ್ದಾನೆಯೋ ಅಥವಾ ಬಡತನದ ಬವಣೆಯಲ್ಲೂ ಉಪನಯನದ ಶಾಸ್ತ್ರ ಮಾಡಿ ಕುತ್ತಿಗೆಗೆ ಜನಿವಾರ ಹಾಕಿಸಿದ ನರ್ಮದಕ್ಕನ ಮೇಲಿನ ಪ್ರೀತಿಗೋ, ಅವನಿಗೇ ಸ್ಪಷ್ಟ ಉತ್ತರ ಗೊತ್ತಿಲ್ಲ. ಕೈಯಲ್ಲಿ ತಟ್ಟೆ ಹಿಡಿದು ‘ಭವತಿ ಭಿಕ್ಷಾಂದೇಹಿ’ ಎನ್ನುವ ಬ್ರಹ್ಮಚರ್ಯದ ದೀಕ್ಷೆ ಹಿಡಿಸಿದ್ದು ತತ್ಕಾಲಕ್ಕೆ ಸೀಮಿತವಾಗಿ ಜೀವನದಲ್ಲೆಂದೂ ಅಂತಹಾ ಲಜ್ಜೆಗೇಡಿನ ಸಂದರ್ಭ ಎದುರು ಬರಲಿಲ್ಲ. ‘ಮೇಲೊಬ್ಬ ಇದಾನೆ, ನೋಡ್ಕಂತಾನೆ’ ಅನ್ನುತ್ತಿರುತ್ತಿದ್ದಳು ನರ್ಮದಕ್ಕ. ನೋಡಿಕೊಳ್ಳುತ್ತಿದ್ದಾನೆ, ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾನೆ. ಎಷ್ಟು ಚೆನ್ನಾಗಿ ಅಂದರೆ ಈ ಮುನ್ನ ನಕುಲನನ್ನು ಬಲ್ಲವರು ಕರುಬುವಷ್ಟು. ಊಪರ್‌ವಾಲಾ ಮನಸ್ಸು ಮಾಡಿದರೆ ಯಾವುದು ಅಸಾಧ್ಯ? ‘ತಿಪ್ಪೆಯ ಮೇಲಿದ್ದವನು ಉಪ್ಪರಿಗೆಯಲ್ಲಿ. ಉಪ್ಪರಿಗೆಯ ಮೇಲಿದ್ದವನು ತಿಪ್ಪೆಯಲ್ಲಿ’.

ಅಂತಃಕರುಣಿ ನರ್ಮದಕ್ಕ ತನ್ನ ಕಷ್ಟಕಾರ್ಪಣ್ಯಗಳ ಜಗತ್ತಿನಲ್ಲಿ ಇವನನ್ನು ಬಿಟ್ಟು ಹಾಕಿರಲಿಲ್ಲ. ಪರೀಕ್ಷೆ ಮಾಡುವುದಕ್ಕೆಂದೇ ದೇವರು ಕಷ್ಟಗಳನ್ನು ಕೊಡುತ್ತಾನಂತೆ. ಕೊಡಲಿ, ಅವನ ಮರ್ಜಿ, ಅವನ ಚೇಷ್ಟೆ. ಆದರೆ ಚೇತರಿಸಿಕೊಳ್ಳಲಾಗದಂತಾ ಹೊಡೆತ ಕೊಟ್ಟು ಮಕಾಡೆ ಮಲಗಿಸುವುದು ಅದೆಂತಾ ಪರೀಕ್ಷೆ? ಅವನೆಂತಾ ದೇವರು? ಅದರಲ್ಲೂ ಕೆಲಕೆಲವರಿಗೆ ಮಾತ್ರಾ ಪೆಟ್ಟಿನ ಮೇಲೆ ಪೆಟ್ಟು ಕೊಡುವ ದುರ್ಬುದ್ಧಿ ಯಾಕೆ? ‘ಪೂರ್ವಾರ್ಜಿತ ಕರ್ಮ’ ಎನ್ನುವುದೆಲ್ಲಾ ಆಧರಿಸಿ ಮೇಲೇಳಲು ನಂಬಿಕೊಳ್ಳುವ ಊರುಗೋಲು ಮಾತ್ರವೇ? ಹಾಗೆನ್ನಿಸುತ್ತಿತ್ತು ಹಿಂದೆ. ಆದರೆ ಈಗಲ್ಲ. ಅಗ್ನಿಪರೀಕ್ಷೆಯಲ್ಲಿ ಪುಟವಿಟ್ಟ ಚಿನ್ನದಂತಾದ ಹೆಮ್ಮೆ ಈಗಿನದು. ಗತಕಾಲದ ಸಂಕಷ್ಟಗಳು ಇನ್ನೆಂದೂ ಮರಳಿ ಬಾರವೆನ್ನುವ ನಂಬಿಕೆ ಈಗಿನದು, ಕೊನೇಪಕ್ಷ ಆರ್ಥಿಕ ಪರಿಸ್ಥಿತಿಯಲ್ಲಾದರೂ. ತಬ್ಬಲಿ ಹುಡುಗ ಅಕ್ಕನ ಮಡಿಲು ಸೇರಿದ್ದ. ಅಕ್ಕ ಅವನನ್ನು ಎದೆಗೊತ್ತಿಕೊಂಡು ಸಾಕಿದ್ದಳು. ವಿಧಿ ಅಕ್ಕನ ಕಡೆ ಕೆಂಗಣ್ಣು ಬೀರಿತು. ಭಾವನನ್ನು ನುಂಗಿ ನೊಣೆಯಿತು. ಮಳೆಗಾಲದ ಒಂದು ದಿನ ಹಳ್ಳ ದಾಟಿ ಮನೆಯ ಕಡೆ ಬರುತ್ತಿದ್ದವನು ಏಕಾಏಕಿ ನುಗ್ಗಿದ ಪ್ರವಾಹದಿಂದ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ, ಶವಕ್ಕಾಗಿ ಹಗಲಿರುಳು ಹುಡುಕಾಟ ನಡೆದು, ಎರಡು ದಿನಗಳ ನಂತರ ಪೊದೆಯೊಂದರಲ್ಲಿ ಸಿಕ್ಕಿಕೊಂಡಿದ್ದ ಶವ. ಇಂತಾ ನೆರೆ ನುಂಗಿದವರ ಕತೆಗಳನ್ನು ಟೀವಿಯಲ್ಲಿ ಕಂಡಾಗಲೆಲ್ಲಾ ಎದೆಯೊಳಗೆ ಅಲಗಿಟ್ಟು ತಿವಿದಂತಾಗಿ, ಆ ಸಂದರ್ಭದ ಅಕ್ಕನ ಕರುಣಾಜನಕ ಪರಿಸ್ಥಿತಿ ನೆನಪಾಗಿ, ಕಣ್ಣುಗಳು ಹನಿಗೂಡಿ, ಹಳೆಯ ಕತೆಗಳೆಲ್ಲಾ ಗೊತ್ತಿವೆ ಶ್ರಾವಂತಿಗೆ. ಅವಳು ಟೀವಿ ಆರಿಸುತ್ತಾಳೆ. ಅವನನ್ನು ಮಡಿಲಿಗೆಳೆದುಕೊಂಡು ತಲೆ ನೇವರಿಸುತ್ತಾಳೆ. ಅವನು ಅವಳ ಮಡಿಲಲ್ಲಿ ಮಗುವಾಗುತ್ತಾನೆ. ಮನುಷ್ಯ ಎಷ್ಟೇ ಬೆಳೆದರೂ, ವಯಸ್ಸು ಮಾಗಿದರೂ, ಶಿಶುತನವೆಂಬುದು ಅವನಲ್ಲಿ ಅಂತರ್ಗತವಾಗಿಬಿಟ್ಟಿರುತ್ತದೆಯಾ? ನಲ್ಮೆಯ ಒಂದು ಸ್ಪರ್ಶಕ್ಕೆ, ಒಲವಿನ ಒಂದು ನುಡಿಗೆ, ಜೀವ ಕರಗಿಹೋಗಿಬಿಡುತ್ತದೆಯಾ? ಚಿಕ್ಕಂದಿನಲ್ಲಿ ಕಳೆದುಕೊಂಡ ತಾಯ ಪ್ರೀತಿ ನರ್ಮದಕ್ಕನ ರೂಪದಲ್ಲಿ ಬಂದೊದಗಿ ಇದೀಗ ಶ್ರಾವಂತಿಯಲ್ಲಿ ಕಂಡುಕೊಂಡಿದ್ದಾನೆ ನೆಮ್ಮದಿಯ ನೆಲೆ. ಪ್ರೀತಿಯ ತಣ್ಪು. ಭಾವ ತೀರಿಕೊಂಡಾಗ ನಕುಲನಿಗೆ ಹನ್ನೆರಡೋ ಹದಿಮೂರೋ. ಕೇತಕಿ ನಾಲ್ಕು ವರ್ಷದ ಬಾಲೆ. ಕಂಗಾಲಾಗಿ ನೆಲ ಕಚ್ಚಲಿಲ್ಲ ಅಕ್ಕ. ಹಲ್ಲುಮುಡಿ ಕಚ್ಚಿ ಬಂಡಿ ಎಳೆದಳು. ಬಂದದ್ದನ್ನು ಎದುರಿಸಿ ಗೆದ್ದಳು. ಇವನಿಗೆ ಬ್ಯಾಂಕಿನಲ್ಲಿ ಕೆಲಸ ಸಿಕ್ಕಿ ಏಳೆಂಟು ವರ್ಷಗಳಾಗುವಷ್ಟರಲ್ಲಿ ಮಗಳ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಂಡಳು.